ಓ.ಎಸ್. ನಂಃ 4/2014

ಪಿ.ಡಬ್ಲ್ಯೂಃ 1

**ದಿನಾಂಕ 13.06.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ವಾದಿಯ ಪರಃ ಶ್ರೀ ಎಮ್.ಪಿ ವಕೀಲರಿಂದಃ**

ದಿನಾಂಕ 05.02.1981 ರ ನೊಂದಾಯಿತ ಖರೀದಿ ಪತ್ರದ ದೃಡಿಕೃತ ನಕಲನ್ನು ನಿಪಿ.35 ಎಂದು, ದಿನಾಂಕ 05.02.1981 ರ ನೊಂದಾಯಿತ ಖರೀದಿ ಪತ್ರದ ದೃಡಿಕೃತ ನಕಲನ್ನು ನಿಪಿ.36 ಎಂದು, ದಿನಾಂಕ 08.03.2004 ರ ನೊಂದಾಯಿತ ಖರೀದಿ ಪತ್ರದ ದೃಡಿಕೃತ ನಕಲನ್ನು ನಿಪಿ.37 ಎಂದು, ಪಹಣಿಗಳನ್ನು ನಿಪಿ.38 ರಿಂದ 50 ಎಂದು ಗುರುತಿಸಲಾಯಿತು.

**ಪಾಟೀ ಸವಾಲು 8 ಮತ್ತು 9 ನೇ ಪ್ರತಿವಾದಿಯರ ಪರ ಶ್ರೀ ಪಿ.ಡಿ ವಕೀಲರಿಂದಃ**

1. ದಿಃ 05.02.1981 ರ ಖರೀದಿ ಪತ್ರವನ್ನು 1 ರಿಂದ 3 ನೇ ಪ್ರತಿವಾದಿಯರು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಖರೀದಿ ಪತ್ರವು ದಾವಾ ಅನುಸೂಚಿ 'ಹೆಚ್' ಆಸ್ತಿಗೆ ಸೇರಿರುವ ಖರೀದಿ ಪತ್ರವಾಗಿರುತ್ತದೆ ಎಂದರೆ ಸರಿ. ದಾವಾ ಅನುಸೂಚಿ 'ಹೆಚ್' ಆಸ್ತಿಯ ಮೇಲೆ ವಾದಿಯರಿಗಾಗಲೀ ಮತ್ತು 1 ರಿಂದ 3 ನೇ ಪ್ರತಿವಾದಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

2. 8 ನೇ ಪ್ರತಿವಾದಿಯು ನನ್ನ ತಂದೆಯವರಿಗೆ ಸೇರಿದ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಆದರೆ ಯಾವ ಸರ್ವೆ ನಂಬರಿನ ಆಸ್ತಿಯನ್ನು ಅವರು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಿದ್ದೇಗೌಡ ಬಿನ್ ಸಿದ್ದೇಗೌಡ @ ದೊಡ್ಡಹುಚ್ಚೇಗೌಡ ಇವರು ನನ್ನ ಚಿಕ್ಕಪ್ಪ ಎಂದರೆ ಸರಿ. ದಿನಾಂಕಃ 03.02.1994 ರಂದು 8 ನೇ ಪ್ರತಿವಾದಿಯು ನನ್ನ ಚಿಕ್ಕಪ್ಪನಾದ ಸಿದ್ದೇಗೌಡ ಬಿನ್ ಸಿದ್ದೇಗೌಡ @ ದೊಡ್ಡಹುಚ್ಚೇಗೌಡ ರವರಿಂದ ಸರ್ವೆ ನಂಬರ್ 82/5 ರಲ್ಲಿ 1 ಎಕರೆ 11 ಗುಂಟೆ, 83/3 ರಲ್ಲಿ 4 ಗುಂಟೆ, 88/4 ರಲ್ಲಿ 1 ಗುಂಟೆ ಒಟ್ಟು 1 ಎಕರೆ 16 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಮಗೆ ಮಾಹಿತಿ ಇಲ್ಲದ ಹಾಗೆ ಸದರಿ ಜಮೀನು ಗಳನ್ನು ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

3. ನನ್ನ ತಂದೆಯ ತಂದೆ ಅಂದರೆ ನನ್ನ ತಾತನಾದ ದೊಡ್ಡಹುಚ್ಚೇಗೌಡರವರಿಗೆ ಒಟ್ಟು 7 ಜನ ಗಂಡು ಮಕ್ಕಳು ಮತ್ತು 2 ಜನ ಹೆಣ್ಣು ಮಕ್ಕಳಿರುತ್ತಾರೆ. ದೊಡ್ಡಹುಚ್ಚೇಗೌಡರ ಆಸ್ತಿಗಳನ್ನೆಲ್ಲ ಅವರ 9 ಜನ ಮಕ್ಕಳು ನೊಂದಾಯಿತ ಪಾಲುಪಟ್ಟಿಯ ಮೂಲಕ ಪಾಲುವಿಭಜನೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಚಿಕ್ಕಪ್ಪನಾದ ಸಿದ್ದೇಗೌಡ ಬಿನ್ ಸಿದ್ದೇಗೌಡ @ ದೊಡ್ಡಹುಚ್ಚೇಗೌಡ ಇವರ ಹಿಸ್ಸೆಗೆ ಹೋಗಿದ್ದ ಸರ್ವೆ ನಂಬರ್ 82/5 ರಲ್ಲಿ 1 ಎಕರೆ 11 ಗುಂಟೆ, 83/3 ರಲ್ಲಿ 4 ಗುಂಟೆ, 88/4 ರಲ್ಲಿ 1 ಗುಂಟೆ ಒಟ್ಟು 1 ಎಕರೆ 16 ಗುಂಟೆ ಜಮೀನನ್ನು 8 ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಮಗೆ ಮಾಹಿತಿ ಇಲ್ಲದ ಹಾಗೆ ಸದರಿ ಜಮೀನು ಗಳನ್ನು ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮೇಲೆ ಹೇಳಿದ 1 ಎಕರೆ 16 ಗುಂಟೆ ಜಮೀನು ನನ್ನ ದೊಡ್ಡಪ್ಪನ ಹಿಸ್ಸೆಗೆ ಹೋದ ಜಮೀನುಗಳಾಗಿರುವುದರಿಂದ ಅವುಗಳಲ್ಲಿ ನನಾಗಲೀ ಅಥವಾ ನನ್ನ ತಂದೆಗಾಗಲೀ ಮತ್ತು ನನ್ನ ತಂದೆಯ ಯಾವುದೇ ವಾರಸುದಾರರಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ 1 ಎಕರೆ 16 ಗುಂಟೆ ಜಮೀನು ನನ್ನ ತಂದೆಯವರಿಗೆ ಸೇರಿದ ಆಸ್ತಿಗಳು ಎಂದು ತೋರಿಸಲು ಯಾವುದೇ ದಾಖಲೆಗಳು ನನ್ನ ಬಳಿ ಇಲ್ಲ ಎಂದರೆ ಸರಿಯಲ್ಲ. ಸದರಿ 1 ಎಕರೆ 16 ಗುಂಟೆ ಜಮೀನನ್ನು 8 ನೇ ಪ್ರತಿವಾದಿಯು ನನ್ನ ದೊಡ್ಡಪ್ಪನಿಂದ ಖರೀದಿ ಮಾಡಿದ ಆಸ್ತಿಗಳಾಗಿರುವುದರಿಂದ 8 ನೇ ಪ್ರತಿವಾದಿಯೇ ಸದರಿ ಜಮೀನಿನ ಮಾಲೀಕನಾಗಿರುತ್ತಾನೆ ಎಂದರೆ ಸರಿಯಲ್ಲ. ಆದ್ದರಿಂದ 8 ನೇ ಪ್ರತಿವಾದಿಯನ್ನು ನಾವು ಅನಗತ್ಯವಾಗಿ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸಿ, ಡಿ ಮತ್ತು ಹೆಚ್ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**

**ಕೆ.ಆರ್.ನಗರ**